ಈ) ಖಾಜಿ ಕಲ್ಲುಗುಡ್ಡದ ಅತಿ ಹೆಚ್ಚಿನ ಎತ್ತರ ಪ್ರದೇಶದಲ್ಲಿ ಈ ದೇವಸ್ಥಾನವಿದ್ದು, ಈ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಕಲ್ಲುಗಣಿಗಾರಿಕೆ ನಡೆಯುತ್ತಿಲ್ಲ. ಹಾಗೂ ಈ ಪ್ರದೇಶದಲ್ಲಿ ಇಲಾಖೆಯಿಂದ ಕಲ್ಲು ಗಣಿಗಾರಿಕೆಗಾಗಿ ಯಾವುದೇ ಪರವಾನಿಗೆಯನ್ನು ನೀಡಿರುವುದಿಲ್ಲ. ಈ ಬೆಟ್ಟಕ್ಕೆ ಹೊಂದಿಕೊಂಡಂತೆ ಸುಮಾರು 750 ಮೀಟರು ಅಂತರದಲ್ಲಿರುವ ದೊಡ್ಡ ಅಯ್ಯರ್ ಗ್ರಾಮದ ಸರ್ವೆ ನಂ. 76ರ ಬೆಟ್ಟದಲ್ಲಿ ಇಲಾಖೆಯಿಂದ 10.00 ಎಕರೆ ಪ್ರದೇಶದಲ್ಲಿ ಕಟ್ಟಡ ಕಲ್ಲಿಗಾಗಿ 5 ಕಲ್ಲುಗಣಿ ಕಾರ್ಯವನ್ನು ನಿಷ್ಕ್ರಿಯವಾಗಿಟ್ಟಿದ್ದಾರೆ. ಮತ್ತು ಈ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಕ್ರಷರ್ ಯಂತ್ರಗಳು ಸಹ ಇರುವುದಿಲ್ಲ. ಆದ್ದರಿಂದ ಈ ಬೆಟ್ಟದ ಪ್ರದೇಶದಲ್ಲಿ ಯಾವುದೇ ಪರಿಸರ ಮಾಲಿನ್ಯ ಉಂಟಾಗುವ ಸಾಧ್ಯತೆ ಇರುವುದಿಲ್ಲ. ಹಾಗೂ ಸಾಂಪ್ರದಾಯಿಕ ಆಚರಣೆಗೆ ಅಡಚಣೆ ಯಾಗುವುದಿಲ್ಲ.

ಸಂಖ್ಯೆ : 46 (53) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)

ಮಾನ್ಯ ಮುಖ್ಯಮಂತ್ರಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರ್ಕಾರಿ ಸ್ವಾಮ್ಯದ ಮೈಸೂರು ಮಿನರಲ್ಸ್ ಸಂಸ್ಥೆಯ ಈ ಹಿಂದಿನ ಮುಖ್ಯಸ್ಥರುಗಳು ತಪ್ಪು ನಿರ್ಧಾರ ಕೈಗೊಂಡ ಕಾರಣದಿಂದಾಗಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟಾಗಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಯಾವ ಕಾರಣಗಳಿಗಾಗಿ ಈ ನಷ್ಟ ಉಂಟಾಗಿದೆ;

ಇ) ಎಷ್ಟು ಅವಧಿಯಿಂದ ಈ ನಷ್ಟ ಉಂಟಾಗಿದೆ; (ಪ್ರಕರಣಗಳ ಪೂರ್ಣ ವಿವರಗಳನ್ನು ಒದಗಿಸುವುದು);

ಈ) ಇದರಲ್ಲಿ ಭಾಗಿಗಳಾದ ಅಧಿಕಾರಿಗಳು ಮತ್ತು ಉದ್ಯಮಿಗಳ ಹೆಸರು ವಿವರಗಳೇನು;

ಉ) ಸರ್ಕಾರ ಈ ವಿಷಯವಾಗಿ ಲೋಪವೆಸಗಿರುವ ತಪ್ಪಿತಸ್ಥರ ಮೇಲೆ ಕೈಗೊಳ್ಳಲಿರುವ ಕ್ರಮಗಳೇನು;

ಊ) ಹಾಗಿದ್ದಲ್ಲಿ, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ

ನಷ್ಟ ಉಂಟಾಗಿರುವ ಈ ಪ್ರಕರಣವನ್ನು ಸರ್ಕಾರವು ಲೋಕಾಯುಕ್ತ ತನಿಖೆಗೆ ವಹಿಸುತ್ತದೆಯೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ

ಅ) ಸದರಿ ವಿಷಯವನ್ನು ಸರ್ಕಾರದಿಂದ ಲೋಕಾಯುಕ್ತ ತನಿಖೆಗೆ ಆದೇಶವಾಗಿರುವುದರಿಂದ, ಸಂಬಂಧಪಟ್ಟ ದಾಖಲೆ ಮತ್ತು ಕಡತಗಳನ್ನು ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಯಿಂದ ಲೋಕಾಯುಕ್ತ ಕಛೇರಿಗೆ ಒದಗಿಸಲಾಗಿದೆ. ಲೋಕಾಯುಕ್ತ ತನಿಖಾ ವರದಿ ಬಂದ ನಂತರ ನಷ್ಟದ ಪ್ರಮಾಣವು ತಿಳಿಯಬಹುದಾಗಿದೆ.

ಆ) ಈ ವಿಷಯವೂ ಕೂಡ ಲೋಕಾಯುಕ್ತ ತನಿಖೆಯ ನಂತರವೇ ತಿಳಿಯಬಹುದಾಗಿದೆ.

ಇ) ಸರ್ಕಾರದ ಆದೇಶ ಸಂಕ್ಯೆ : ಸಿಐ. 164 : ಎಂಎಂಎಂ. 2006 ದಿನಾಂಕ : 01-01-2000ದಿಂದ ದಿನಾಂಕ :22-07-2006ರ ಅವಧಿಯಲ್ಲಿ ನಡೆದಿದೆ ಎನ್ನಲಾದ ನಷ್ಟದ ಬಗ್ಗೆ ವಿಚಾರಣೆಯನ್ನು ಲೋಕಾಯುಕ್ತರಿಂದ ಕೈಗೊಳ್ಳಲಾಗಿರುತ್ತದೆ.

ಈ) ಮಾನ್ಯ ಲೋಕಾಯುಕ್ತರಿಂದ ವಿಚಾರಣೆಯು ಪೂರ್ಣಗೊಂಡ ನಂತರವೇ ವಿವರವು ತಿಳಿಯಬಹುದಾಗಿರುತ್ತದೆ.

ಉ) ಸದರಿ ವಿಚಾರದಲ್ಲಿ ಲೋಕಾಯುಕ್ತರಿಂದ ವರದಿ ಬಂದ ನಂತರ ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ಊ) ಹೌದು. ಸರ್ಕಾರದ ಆದೇಶ ಸಂಖ್ಯೆ: ಸಿಐ. 164: ಎಂಎಂಎಂ 2006 ದಿನಾಂಕ : 12-03-2007 ರಂದು ಸದರಿ ವಿಷಯವನ್ನು ಈಗಾಗಲೇ ಮಾನ್ಯ ಲೋಕಾಯುಕ್ತರ ತನಿಖೆಗೆ ಒಳಪಡಿಸಲಾಗಿದೆ.